ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಪುತ್ತೂರಿನಿಂದ ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಲೈನ್ ಮಂಜೂರಾತಿ

2016 (2402) - ಶ್ರೀ ಅಂಗಾರ್ ಎಸ್. (ಸುಳ್ಯ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರಿನಿಂದ ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಲೈನ್ ಮಂಜೂರು ಮಾಡಿದ್ದು, ಸದರಿ ಕಾಮಗಾರಿಯನ್ನು ಈವರೆಗೆ ಪ್ರಾರಂಭಿಸದೆ ಇರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬರದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಷ್ಟು ಸಮಯದಲ್ಲಿ ಕಾಮಗಾರಿಯನ್ನು ಪೂರ್ತಿಗೊಳಿಸಲಾಗಿದೆ.

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು ಗಮನಕ್ಕೆ ಬಂದಿದೆ.

ಆ) ಈ ಹಿಂದೆ ಪುತ್ತೂರಿನಿಂದ ಸುಳ್ಯಕ್ಕೆ 110 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ಹಾಲಿ ಇರುವ 33 ಕೆ.ವಿ. ಪ್ರಸರಮಾ ಮಾರ್ಗದ ಕಾರಿಡಾರಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ, ಈ ಕಾಮಗಾರಿಯನ್ನು ಪ್ರಾರಂಭಿಸಿದಲ್ಲಿ ಹಾಲಿ ಇರುವ 33 ಕೆ.ವಿ. ಪ್ರಸರಣಾ ಮಾರ್ಗದಲ್ಲಿ ಬರುವ ವಿದ್ಯುತ್ ವಿತರಣಾ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುತ್ತಿರುವ ಗ್ರಾಹಕರಿಗೆ ಸಂಪೂರ್ಣವಾಗಿ ವಿದ್ಯುತ್ ನಿಲುಗಡೆಯಾಗುವ ಸಂಭವ ಇರುವುದರಿಂದಲೂ ಹಾಗೂ ಈ ಮಾರ್ಗವು ಕಾದಿಟ್ಟ ಅರಣ್ಯ ಪ್ರದೇಶದ ಮೂಲಕ ಸ್ವಲ್ಪ ದೂರ ಹಾದು ಹೋಗಬೇಕಾಗಿರುವುದರಿಂದಲೂ ಹಾಗೂ ಇನ್ನಿತರ ಅಡಚಣೆಗಳಿಂದಲೂ ಮಂಜೂರಾದ ಈ ಕಾಮಗಾರಿಯು ರದ್ದಾಗಿರುತ್ತದೆ.

ಆದುದರಿಂದ, ಪರ್ಯಾಯ ಮಾರ್ಗವಾಗಿ ಉದ್ದೇಶಿತ 220 ಕೆ.ವಿ. ಪುತ್ತೂರು (ನೆಟ್ಲ ಮುಡ್ನೂರ್) ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಕುಂಬ್ರಾ, ಬೆಳ್ಳಾರೆ, ಮಾರ್ಗವಾಗಿ ಸುಳ್ಯಾಗೆ ಸುಮಾರು 45 ಕಿ.ಮಿ. ಉದ್ದದ ವಿದ್ಯುತ್ ಪ್ರಸರಣ ಮಾರ್ಗದ ನಿರ್ಮಾಣ ಕೈಗೊಳ್ಳಲು, ಪ್ರಾರಂಭಿಕ ಕಾಲ್ನಡಿಗೆ ಸರ್ವೇಯನ್ನು ನಡೆಸಲಾಗಿದೆ. ಈ ಸಂಬಂಧದಲ್ಲಿ ಪ್ರಸರಣಾ ಮಾರ್ಗವು ಹಾದು ಹೋಗುವ ಪ್ರದೇಶಗಳ ವಿವರಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಜನ ಪ್ರತಿನಿಧಿಗಳಿಗೆ ಒದಗಿಸಲಾಗಿದ್ದು ಅವರ ಸಲಹೆ ಸೂಚನೆಗಳನ್ನು ಸಹ ಪಡೆಯಲಾಗುತ್ತಿದೆ. ಈಗ ವಿಸ್ತೃತ ಸರ್ವೆ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು ಸರ್ವೆ ಕಾರ್ಯವು ಪ್ರಗತಿಯಲ್ಲಿದೆ. ಸುಳ್ಯಾದಲ್ಲಿ 110 ಕೆ.ವಿ. ವಿದ್ಯುತ್ ಸಬ್-ಸ್ಟೇಷನ್‌ನನ್ನು ನಿರ್ಮಾಣವು ಪುತ್ತೂರಿನಲ್ಲಿ (ನೆಟ್ಲ ಮುಡ್ನೂರ್) ನಿರ್ಮಾಣ ಮಾಡಲಾಗುವ 220 : 110 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ಮೇಲೆ ಅವಲಂಭಿತವಾಗಿದೆ ಆದುದರಿಂದ ಪುತ್ತೂರಿನಲ್ಲಿ (ನೆಟ್ಲ ಮುಡ್ನೂರ್) 220 - 110 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ನಿರ್ಮಾಣ ಮಾಡುವುದು ಹಾಗೂ ಗುರುವಾಯನ ಕೆರೆಯಿಂದ ಪುತ್ತೂರಿನಲ್ಲಿ ಉದ್ದೇಶಿತ 220:110 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರಕ್ಕೆ 220 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಮ ಕಾರ್ಯಗಳಿಗೆ ಮೊದಲ ಆದ್ಯತೆಯನ್ನು ನೀಡಲಾಗುತ್ತಿದೆ.